ಅ) ಈ ಕಾಲೇಜುಗಳಿಗೆ ಎಷ್ಟು ಪ್ರವೇಶ ಅವಕಾಶವನ್ನು ಈ ಹಿಂದೆ ಕಲ್ಪಿಸಲಾಗಿತ್ತು?

ಇ) 2000-2001ನೇ ಸಾಲಿನಲ್ಲಿ ರಾಜ್ಯಕ್ಕೆ ಹೆಚ್ಚುವರಿಯಾಗಿ ಎ.ಐ.ಸಿ.ಟಿ.ಇ. ಯಿಂದ ಪಡೆದಿರುವ ಸೀಟುಗಳ ಸಂಖ್ಯೆ ಎಷ್ಟು, ಮತ್ತು ಎಷ್ಟು ಕಾಲೇಜುಗಳಿಗೆ ಹೆಚ್ಚುವರಿ ಸೀಟು ಪಡೆಯಲು ಅವಕಾಶ ಮಾಡಲಾಗಿದೆ?

ಈ) ರಾಜ್ಯದ ವಿದ್ಯಾರ್ಥಿಗಳಿಗೆ ಈ ವರ್ಷ ಎಷ್ಟು ಹೆಚ್ಚು ಅವಕಾಶ ಸಿಕ್ಕಿರುವುದು?

ಉ) ಪ್ರತಿ ವರ್ಷ ಈ ಎಲ್ಲಾ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮುಗಿಸಿ ಹೊರಬರುವ ಇಂಜಿನಿಯರ್‌ಗಳ ಒಟ್ಟು ಸಂಖ್ಯೆ ಎಷ್ಟು? ಇಷ್ಟು ಇಂಜನಿಯರ್‌ಗಳಿಗೆ ಉದ್ಯೋಗ ಅವಕಾಶವಿದೆಯೇ?

ಡಾ|| ಬಿ. ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು) :

ಅ)	ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳು	- 06
	ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳು	- 10
	ಅನುದಾನ ರಹಿತ ಇಂಜಿನಿಯರಿಂಗ್ ಕಾಲೇಜುಗಳು	- 64
		80

ಆ) 25,544

ಇ) 3,755 ಸೀಟುಗಳನ್ನು ಪಡೆಯಲಾಗಿದೆ 41 ಇಂಜಿನಿಯರಿಂಗ್ ಕಾಲೇಜುಗಳಿಗೆ.

ಈ) ಸುಮಾರು 1,803 ಸೀಟುಗಳು

ಉ) 9606

ಸೂಲಗಿತ್ತಿಯರ ವಾಸದ ಮನೆಗಳ ದುರುಪಯೋಗ

2882 - ಶ್ರೀ ಚೌಡರೆಡ್ಡಿ (ಚಿಂತಾಮಣಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಂತಾಮಣಿ ಕ್ಷೇತ್ರದ ಕಡಪದಲಮರಿ, ಕೋಟಗಲ್, ಶೆಟ್ಟಿಹಳ್ಳಿ ಮತ್ತು ಕೆಲವು ಗ್ರಾಮಗಳಲ್ಲಿ ಸೂಲಗಿತ್ತಿಯರ ವಾಸಕ್ಕಾಗಿ ಸರ್ಕಾರ ಮನೆಗಳನ್ನು ಕಟ್ಟಿಸಿ ಸೂಲಗಿತ್ತಿಯರನ್ನು ನೇಮಕ ಮಾಡಿ ಗರ್ಭಿಣಿ ಸ್ತ್ರೀಯರ ಹೆರಿಗೆಗೆ ಅನುಕೂಲ ಮಾಡಿಕೊಟ್ಟಿದ್ದು, ಈಗ ಈ ಸೂಲಗಿತ್ತಿಯರನ್ನು ಬೇರೆ ಕಡೆ ವರ್ಗ ಮಾಡಿದ್ದರಿಂದ ಖಾಲಿ ಬಿದ್ದಿರುವ ಸದರಿ ವಾಸದ ಕಟ್ಟಡಗಳು ದುರುಪಯೋಗ ಮತ್ತು ಶಿಥಿಲವಾಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಗ್ರಾಮಾಂತರ ಗರ್ಭಿಣಿ ಸ್ತ್ರೀಯರ ಕಲ್ಯಾಣಕ್ಕಾಗಿ ತೆಗೆದುಕೊಂಡ ಪರ್ಯಾಯ ಕ್ರಮ ಏನು?

ಡಾ॥ ಎ.ಬಿ. ಮಾಲಕ ರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಈ ಕೇಂದ್ರಗಳಲ್ಲಿ ಸಿಬ್ಬಂದಿಗಳ ವರ್ಗಾವಣೆಯಿಂದ ವಸತಿ ಗೃಹಗಳು ಖಾಲಿ ಇರುವುದು ನಿಜವಾಗಿದ್ದು ಗಮನಕ್ಕೆ ಬಂದಿಲ್ಲ.

ಆ) ರಾಜ್ಯದಲ್ಲಿ 1388 ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರ ಹುದ್ದೆಗಳು ಖಾಲಿಯಿದ್ದು ಇಂತಹ ಸ್ಥಳಗಳಲ್ಲಿ ಪರ್ಯಾಯ ವ್ಯವಸ್ಥೆಯಿಂದ ಗರ್ಭಿಣಿ ಸ್ತ್ರೀಯರಿಗೆ ಸೇವೆಯನ್ನು ಒದಗಿಸಲಾಗುತ್ತಿದೆ.

ಶುಶ್ರೂಷಕಿಯರನ್ನು ಕಿರಿಯ ಮಹಿಳಾ ಆರೋಗ್ಯ ಸಹಾಯಕಿ ಹುದ್ದೆಯಲ್ಲಿ ನೇಮಕ ಮಾಡಲು ತೀರ್ಮಾನ ಕೈಗೊಂಡಿದ್ದು ಇದರಿಂದ ಬಹುತೇಕ ಖಾಲಿ ಹುದ್ದೆಗಳ ಕೊರತೆಯನ್ನು ನೀಗಿಸಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ಮೂಲಕ ಗರ್ಭಿಣಿ ಸ್ತ್ರೀಯರಿಗೆ ಸೇವೆಯನ್ನು ಒದಗಿಸಲು ಕ್ರಮ ಕೈಗೊಳ್ಳಲಾಗಿದೆ. ಕೆಲವು ಕಡೆ ಅಕ್ಕಪಕ್ಕದ ಸಮೀಪ ಕೇಂದ್ರಗಳಿಂದ ಮಹಿಳಾ ಆರೋಗ್ಯ ಸಹಾಯಕಿಯರಿಗೆ ಹೆಚ್ಚುವರಿ ಕಾರ್ಯಭಾರವನ್ನು ಕೊಟ್ಟು ಕೊಂಚಮಟ್ಟಿಗೆ ಕೊರತೆಯನ್ನು ನೀಗಿಸಲಾಗಿದೆ. ಕೆಲವು ಪ್ರದೇಶಗಳಲ್ಲಿ ಸ್ಥಳೀಯ ಖಾಸಗಿ ದಾದಿಯರಿಗೆ ಸ್ಥಳ ತರಬೇತಿ ನೀಡಿ ಗರ್ಭಿಣಿ ಸ್ತ್ರೀಯರಿಗೆ ನೆರವಾಗಲು ಕ್ರಮ ಕೈಗೊಳ್ಳಲಾಗಿದೆ.

ಚಿಂತಾಮಣಿ ತಾಲ್ಲೂಕು ಬುರುಡುಗುಂಟೆ ಗ್ರಾಮದ ಅಂಗಡಿ ಮಳಿಗೆಗಳನ್ನು ಗ್ರಾಮ ಪಂಚಾಯ್ತಿಯವರು ಅಕ್ರಮ ವಿಲೇವಾರಿ

2883 - ಶ್ರೀ ಚೌಡರೆಡ್ಡಿ (ಚಿಂತಾಮಣಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಂತಾಮಣಿ ತಾಲ್ಲೂಕು ಬುರುಡುಗುಂಟೆ ಗ್ರಾಮ ಪಂಚಾಯತಿ ಕೇಂದ್ರ ಸ್ಥಾನದಲ್ಲಿ ದಿನಾಂಕ: 9-5-98 ರಂದು ಪಂಚಾಯತಿ ಅಂಗಡಿ ಮಳಿಗೆಗಳನ್ನು ಬಹಿರಂಗ ಹರಾಜು ಮೂಲಕ ಬಾಡಿಗೆಗೆ ನೀಡಲು ದಿ 1-5-98 ರಲ್ಲಿ ಸದರಿ ಗ್ರಾಮ ಪಂಚಾಯತಿ ಕಛೇರಿ ಪ್ರಕಟಣೆಯಿಂದ ತಿಳಿಸಿದ್ದರೂ ಸಹ ಆ ದಿನ ಬಹಿರಂಗ ಹರಾಜು ಮಾಡದೆ ನಿಲ್ಲಿಸಿರುವುದು ನಿಜವೇ?

ಆ) ಬಹಿರಂಗ ಹರಾಜು ನಿಲ್ಲಿಸಿ ಪುನಃ ಹರಾಜು ಮಾಡದೆ ಅವರಿಗೆ ಇಷ್ಟ ಬಂದ ವ್ಯಕ್ತಿಗಳಿಗೆ ಕಡಿಮೆ ಬಾಡಿಗೆಗೆ ಸದರಿ ಅಂಗಡಿ ಮಳಿಗೆಗಳನ್ನು ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಇಂತಹ ಅಂಗಡಿಗಳ ಪೈಕಿ ಒಂದರಲ್ಲಿ ಅಕ್ರಮವಾಗಿ ಸಾರಾಯಿ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಆ ಸಾರಾಯಿ ಮಾರಾಟದ ಅಂಗಡಿ, ಶಾಲೆ ಮತ್ತು ದೇವಸ್ಥಾನದ ಪಕ್ಕದಲ್ಲಿಯೇ ಇದ್ದು, ಶಾಲೆ, ದೇವಸ್ಥಾನದ ಪಕ್ಕದಲ್ಲಿ ಸಾರಾಯಿ ಮಾರಾಟ ಮಾಡದಿರುವಂತೆ ಸರ್ಕಾರದ ಸುತ್ತೋಲೆ ಇದ್ದರೂ ಸಹ ಮೂರು ವರ್ಷಗಳಿಂದ ಈ ಬಗ್ಗೆ ಸರ್ಕಾರವು ಕಾನೂನಿನ ರೀತ್ಯ ಯಾವ ಕ್ರಮವೂ ತೆಗೆದುಕೊಳ್ಳದೆ ಇರುವುದು ಸರಿಯೇ?